"ನೀನೇ ತೆಗೆದಿದ್ದೀಯ... ನನಗೆ ಚೆನ್ನಾಗಿ ಗೊತ್ತು."

"ಇಲ್ಲ ನಾನು ಅಂಥವನಲ್ಲ, ನಾನು ಆ ದುಡ್ಡನ್ನು ನೋಡೇ ಇಲ್ಲ! ನಾನು ಕದ್ದದ್ದನ್ನು ನೋಡಿದ್ದೀರಾ?"

ಸುತ್ತ ನೆರೆದವರಲ್ಲಿ ಯಾರೋ, "ಎರಡು ರೂಪಾಯಿಯನ್ನೇ ಕದ್ದು ಆಮೇಲೆ ವಾಪಸು ಕೊಟ್ಟು ಹೋದವ ಲಕ್ಷಗಟ್ಟಲೆ ಹಣ ಕಣ್ಣಿಗೆ ಬಿದ್ದರೆ ಬಿಡುವುದುಂಟಾ? ವಿಚಾರಿಸಿ... ಆತ ಮಾತಾಡುವುದನ್ನು ಬಿಟ್ಟು ಕೆಲವು ತಿಂಗಳಾಯಿತು. ಕೆಲಸಕ್ಕೂ ಹೋಗದೆ ಕೈಯಲ್ಲಿ ಕಾಸಿಲ್ಲದೆ ಇಂತಹ ಕಾರ್ಯಕ್ಕೆ ಕೈ ಹಾಕಿದ್ದಾನೆ. ಬಿಡಬೇಡಿ" ಎಂದಾಗ ಅಪವಾದ ತಟ್ಟೆಯೇ ಬಿಟ್ಟಿತು ಎಂದುಕೊಂಡ. ನಾನು ಕದ್ದಿಲ್ಲ ಎಂಬುದನ್ನು ಯಾರೂ ನಂಬುತ್ತಿಲ್ಲ. ನಾನೇಕೆ ಮಾತಾಡುತ್ತಿರಲಿಲ್ಲ ಎಂಬ ಸತ್ಯವನ್ನು ಹೇಳಿಬಿಡುತ್ತೇನೆ. ಆಗಲಾದರೂ ನನ್ನನ್ನು ಇವರು ನಂಬಬಹುದು.

"ಇಲ್ಲ ನಾನು ಕದ್ದಿಲ್ಲ. ನಾನು ಚೌತಿಯ ಚಂದ್ರನನ್ನು ನೋಡಿದ್ದೆ. ಆದ್ದರಿಂದಲೇ ಈ ಅಪವಾದ ನನ್ನ ಮೇಲೆ ಬಂದಿದೆ. ನನ್ನ ಮೇಲೆ ಅಪವಾದ ಬರಬಾರದೆಂಬ ಕಾರಣಕ್ಕೇ ನಾನು ಮಾತನಾಡುವುದನ್ನು ನಿಲ್ಲಿಸಿದ್ದು..." ಎನ್ನುತ್ತಿದ್ದಂತೆ ಅವನ ಮಾತು ಮುಗಿಯುವ ಮೊದಲೇ ಎಲ್ಲರೂ ಗೊಳ್ಳೆಂದು ನಗುತ್ತ, "ಚೆಂದದ ನಾಟಕ ಆಡುತ್ತಿದ್ದಿ. ಚೌತಿ ಚಂದ್ರ ನೋಡಿದ್ದಕ್ಕೇ ಹೀಗೆಲ್ಲಾ ಆದದ್ದಾ... ಹಾಗಾದರೆ ದುಡ್ಡು ಎಲ್ಲಿ ಹೋಯಿತು... ಇನ್ನೆರಡು ದಿನದಲ್ಲಿ ಆ ಹಣ ಇಲ್ಲಿಗೆ ಬಂದು ಸೇರತಕ್ಕದ್ದು. ಇಲ್ಲವಾದರೆ ಪೊಲೀಸ್ ಕಂಪ್ಲೆಂಟ್ ಕೊಡಬೇಕಾಗುತ್ತದೆ... ಎಚ್ಚರ" ಎಂದು ಬೆಚ್ಚಿಬೀಳುವಂತೆ ಹೆದರಿಸಿದಾಗ ಮರುಮಾತಾಡದೆ ಅಲ್ಲಿಂದ ಮನೆಗೆ ಬಂದ.

ಏನು ಮಾಡಲಿ? ಹೇಗೂ ಅಪವಾದ ಬಂದಾಯಿತು. ನಾನು ಕಳ್ಳನಲ್ಲ ಎಂದು ಸಾಬೀತು ಪಡಿಸುವುದಾದರೂ ಹೇಗೆ? ಆ ದುಡ್ಡನ್ನು ತೆಗೆದಿದ್ದಾದರೂ ಯಾರು? ಏನೂ ಗೊತ್ತಾಗುತ್ತಿಲ್ಲ. ಈ ಅಪವಾದ ಊರೆಲ್ಲ ಹರಡುವ ಮೊದಲು ನಾನು ಕಳ್ಳನಲ್ಲ ಎಂದು ಸಾಬೀತು ಪಡಿಸಲೇ ಬೇಕು. ಅವರಿಗಿಂತ ಮೊದಲೇ ನಾನು ಪೊಲೀಸ್ ಸ್ಟೇಷನ್ನಿಗೆ ಹೋಗಿ ನಡೆದುದನ್ನೆಲ್ಲ ತಿಳಿಸಿ, ನಾನು ಕಳ್ಳನಲ್ಲ ಎಂಬುದನ್ನು ಸಮರ್ಥಿಸುತ್ತೇನೆಂದು ಧೈರ್ಯಮಾಡಿಕೊಂಡು ಅಪೂರ್ವ ಪೊಲೀಸ್ ಸ್ಟೇಷನ್ನಿನತ್ತ ಹೊರಟ.

ಮನೆಯಿಂದ ಹೊರಬೀಳುತ್ತಿದ್ದಂತೆ ಕಂಡವರೆಲ್ಲ ಈತನನ್ನು ಕಳ್ಳನನ್ನು ನೋಡಿದಂತೆ ಅನುಮಾನಿಸಿ ನೋಡುತ್ತಿರುವುದು ಕಿರಿಕಿರಿಯನ್ನುಂಟುಮಾಡುತ್ತಿತ್ತಾದರೂ ಇಂದು ಸಂಜೆಯೊಳಗೆ ಸತ್ಯ ಸಾಬೀತು ಪಡಿಸುತ್ತೇನೆಂಬ ನಿರ್ಧಾರದೊಂದಿಗೆ ನಡೆಯತೊಡಗಿದ. ಈ ರಗಳೆಯೇ ಬೇಡವೆಂದುಕೊಂಡು ಜನಸಂದಣಿ ಇಲ್ಲದ ಒಳದಾರಿಯಲ್ಲಿ ಹೊರಟ. ಸ್ವಲ್ಪ ದೂರ ಹೋಗುತ್ತಿದ್ದಂತೆ ಇವನನ್ನು ದೂಡಿಕೊಂಡು ಒಬ್ಬ ಮಂದಕ್ಕೆ ಓಡಿದ. ಕೋಪದಿಂದ ಅಪೂರ್ವ ತಕ್ಷಣವೇ ಆತನನ್ನು ಹಿಂಬಾಲಿಸಿ ಕೈಹಿಡಿದು ಎಳೆದ. ಅವನ ಮುಖ ನೋಡುತ್ತಿದ್ದಂತೆ ಅಪೂರ್ವನಿಗೆ ಆಶ್ಚರ್ಯವಾಯಿತಲ್ಲದೆ ತನ್ನ ಸಮಸ್ಯೆ ಬಗೆಹರಿಯಿತೆಂದುಕೊಂಡ. ಆತ ನೋಡುವುದಕ್ಕೆ ಥೇಟ್ ಅಪೂರ್ವನಂತೆಯೇ ಇದ್ದ. ಅಪೂರ್ವನು 'ಪ್ರಪಂಚದಲ್ಲಿ ಏಳು ಜನ ಒಂದೇ ರೀತಿ ಮುಖದವರಿರುತ್ತಾರಂತೆ. ಈತ ನನ್ನಂತೆಯೇ ಇದ್ದಾನೆ. ಅಂದರೆ ಈತನೇ ಆ ಹಣವನ್ನು ಕದ್ದಿರಬೇಕು. ಆದ್ದರಿಂದಲೇ ಅವರೆಲ್ಲ ನನ್ನನ್ನು ಅನುಮಾನಿಸಿದ್ದು. ನನಗೇ ನಂಬಲಾಗದಷ್ಟು ಸಾಮ್ಯತೆ ಈತನಲ್ಲಿರುವಾಗ ಅವರ ಕಣ್ಣಿಗೆ ಮೋಸವಾದುದು ಸಹಜ. ಈತನನ್ನು ಕರೆದುಕೊಂಡು ಹೋಗಿ ಅವರ ಮುಂದೆ ನಿಲ್ಲಿಸುತ್ತೇನೆ' ಎಂದುಕೊಳ್ಳುತ್ತ "ಯಾರು ನೀನು?" ಎಂದು ವಿಚಾರಿಸಿದ.

"ನಾನು ಅಪೂರ್ವ... ನೀನ್ಯಾರು?"